

## ಸ್ವಯಂ ಉದ್ಯೋಗಕ್ಕೆ ಬಿದಿರು ಸಾಥ್

ಕಾಡಿನ ಉತ್ಪನ್ನಗಳಲ್ಲಿ ಬಿದಿರು ಕೂಡ ಪ್ರಾಮುಖ್ಯತೆ ಹೊಂದಿದೆ. ಕಾಡಿನ ಜಿಲ್ಲೆ ಎಂದೇ ಪ್ರಸಿದ್ಧಿ ಪಡೆದ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿದಿರು ಉದ್ಯಮ ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ಮಹತ್ವ ಪಡೆದುಕೊಳ್ಳುತ್ತಿದೆ. ಹಳಿಯಾಳದ ದೇಶಪಾಂಡೆ ರುಡ್‌ಸೆಟ್ ಕೇಂದ್ರದಲ್ಲಿ ಮಹಿಳೆಯರಿಗೆ ಮತ್ತು ಆಸಕ್ತ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಪ್ರತಿ ವರ್ಷ ಬಿದಿರು ಕಲಾಕೃತಿ ಸಿದ್ಧಪಡಿಸುವ ತರಬೇತಿ ನೀಡಲಾಗುತ್ತಿದ್ದು ಇದರ ಉಪಯೋಗವನ್ನು ಈಗಾಗಲೇ ಹಲವರು ಪಡೆದುಕೊಂಡಿದ್ದಾರೆ.

ವಿಶೇಷವಾಗಿ ಈ ಭಾಗದ ಸಿದ್ದಿ ಜನಾಂಗದ ಮಹಿಳೆಯರು, ಯುವಕರು ಬಿದಿರಿನಿಂದ ಆಕರ್ಷಕ ರಚನೆಗಳನ್ನು ಮಾಡುವುದರಲ್ಲಿ ತರಬೇತಿ ಪಡೆದಿದ್ದು, ನೂರಾರು ಜನರು ಕೌಶಲ್ಯಾಭಿವೃದ್ಧಿ ಹೊಂದಿ ಇಂದು ಸ್ವಯಂ ಉದ್ಯೋಗದಲ್ಲಿ ತೊಡಗಿದ್ದಾರೆ. ಈ ಮೂಲಕ ಬಿದಿರಿಗೂ ಬೇಡಿಕೆ ಬರಲು ಕಾರಣರಾಗಿದ್ದಾರೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ



## ‘ಕುಣಾಘಟ್ಟ’ ಭಾವೈಕ್ಯತೆಯ ಗುಡಿ!

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ತೆಂಗು ಅಡಿಕೆಗಳ, ಹಸಿರಿನಿಂದ ನಳನಳಿಸುವ ಪ್ರಕೃತಿಯ ಮಡಿಲಲ್ಲಿ ‘ಕುಣಾಘಟ್ಟ’ ಎಂಬುದು ಸಣ್ಣ ಹಳ್ಳಿ. ಹಿಂದುಗಳಷ್ಟೇ ಮುಸ್ಲಿಮರೂ ಇಲ್ಲಿ ವಾಸವಿದ್ದಾರೆ. ಹಳ್ಳಿಯ ಪ್ರವೇಶದಲ್ಲಿಯೇ ನರಸಿಂಹಸ್ವಾಮಿಯ ದೇವಾಲಯವಿದೆ. ಸುಮಾರು ಆರು ನೂರು ವರ್ಷಗಳ ಇತಿಹಾಸವುಳ್ಳ ಈ ದೇವಸ್ಥಾನವನ್ನು ಮೂವತ್ತೈದು ವರ್ಷಗಳ ಹಿಂದೆ ಊರಿನ ಜನರೇ ಜೀರ್ಣೋದ್ಧಾರ ಮಾಡಿಸಿದ್ದಾರೆ. ದೇವರ ವಿಗ್ರಹವು ನಿಂತಿರುವ ಭಂಗಿಯಲ್ಲಿರುವುದು ಇಲ್ಲಿನ ವಿಶೇಷ.

ಇಲ್ಲಿ ಇನ್ನೂ ವಿಶೇಷ ಎನಿಸುವುದು ಗ್ರಾಮದಲ್ಲಿ ವಾಸವಿರುವ ಮುಸ್ಲಿಂ ಸಮುದಾಯದವರೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ತಮ್ಮ ಮನೆಗಳ ಯಾವುದೇ ಶುಭ ಕಾರ್ಯಗಳನ್ನು ಮಾಡುವ ಮೊದಲು ನರಸಿಂಹ ದೇವರಿಗೆ ಹರಕೆ ಸಲ್ಲಿಸಿ ನಂತರ ಕಾರ್ಯಕ್ಕೆಗೊಳ್ಳುವ ಸಂಪ್ರದಾಯ ಇಲ್ಲಿನ ಹಿಂದೂ ಹಾಗೂ ಮುಸ್ಲಿಂರಲ್ಲಿ ಇದೆ. ಇಡೀ ಗ್ರಾಮವು ಕೋಮು ಸೌಹಾರ್ದತೆಗೆ ಸಾಕ್ಷಿಯಾಗಿದೆ.

–ರಾಮಚಂದ್ರ ಎಂ.ಆರ್., ಬೆಂಗಳೂರು

## ನೀವೂ ಬರೆಯಿರಿ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly



## ಕಸದಲ್ಲಿ ಅರಳಿದ ಕಲೆ!

ಕಸದಿಂದ ರಸ ಮಾಡುವ ಕಲೆ ಸಿದ್ಧಿಸುವುದು ವಿಭಿನ್ನ ದೃಷ್ಟಿಕೋನದ ಕಲಾವಿದರಿಗೆ ಮಾತ್ರ ಸಾಧ್ಯ. ಕಲಬುರ್ಗಿಯ ಕಲಾವಿದ ಡಾ. ಪಿ. ಪರಶುರಾಮ ಅವರಿಗೆ ಇಂತಹ ಕಲೆ ಕೈಗೂಡಿದೆ.

ತಂತಿಗಳ ಸಹಾಯದಿಂದ ಹತ್ತು ಹಲವಾರು ಅಲಂಕಾರಿಕ ಮಾದರಿಗಳನ್ನು ಮಾಡಿ ಅವರು ತಮ್ಮ ಕೈಚಳಕ ತೋರಿದ್ದಾರೆ. ಚಿತ್ರದಲ್ಲಿ ಕಂಡು ಬರುತ್ತಿರುವ ಕಾಗೆಯ ಗೂಡು ಮತ್ತು ಯಂತ್ರ ಮಾನವನನ್ನು ಹೀಗೆಯೇ ಉಪಯೋಗಕ್ಕೆ ಬಾರದ ಲೋಹದ ವಸ್ತುಗಳಿಂದ ಕಣ್ಣರಳಿಸಿ ನೋಡುವಂತಹ ಕಲಾಕೃತಿಗಳಾಗಿ ಮಾಡಿದ್ದಾರೆ. ಜನಸಾಮಾನ್ಯರಿಗೆ ತ್ಯಾಜ್ಯಗಳು, ತ್ಯಾಜ್ಯಗಳಾಗಿಯೇ ಕಂಡರೆ, ಕಲಾ ದೃಷ್ಟಿಯಿರುವ ಕಲಾವಿದರಿಗೆ ಅದು ಕಲಾಕೃತಿ ಅರಳಿಸುವ ವಸ್ತುಗಳಾಗಿ ಕಾಣುತ್ತವೆ.

–ಈರಣ್ಣ ಬೆಂಗಾಲಿ, ರಾಯಚೂರು